

# ಶತಾಯುಷಿ ಹಡಗು!

ಜಗತ್ತಿನ ಅತ್ಯಂತ ಹಳೆಯ ಹಡಗನ್ನು ನೋಡಿದ್ದೀರಾ? ಸಿಡ್ನಿಯ ವಾಂಘಾಲ್ ಸೆಂಟಿನರಿ ಬುಶ್ ಲ್ಯಾಂಡ್ ಹೋಮ್ ಬುಶ್ ಕೊಲ್ಲಿಯಲ್ಲಿ ಶತಮಾನಗಳಷ್ಟು ಹಿಂದಿನಿಂದಲೂ ನಿಂತ ಜಾಗದಲ್ಲೇ ತೇಲುತ್ತಾ ನಿಂತಿದೆ ಈ ಅತೀ ಹಳೆಯ ಹಡಗು.

ಇದರ ಹೆಸರು ಎಸ್‌ಎಸ್ ಆಯರ್ಫೀಲ್ಡ್ , ಹಿಂದೆ ಕೊರಿಮಲ್ ಎಂದು ಕರೆಯಲಾಗುವ 102 ವರ್ಷಗಳಷ್ಟು ಹಳೆಯದಾದ ಈ ಹಡಗನ್ನು 2ನೇ ವಿಶ್ವಯುದ್ಧದಲ್ಲಿ ಸಿಡ್ನಿ ಮತ್ತು ನ್ಯುಕೆಸಲ್ ನಡುವೆ ಕಲ್ಲಿದ್ದಲು ಸಾಗಣೆ ಮಾಡಲು ಮತ್ತು ಯುದ್ಧ ಚಟುವಟಿಕೆಗಳಿಗೆ ನಿಯೋಜಿಸಲಾಗಿತ್ತು. ಎಸ್‌ಎಸ್ ಆಯರ್ಫೀಲ್ಡ್ ಅನ್ನು 1911 ರಲ್ಲಿ ಇಂಗ್ಲೆಂಡ್‌ನಲ್ಲಿ ನಿರ್ಮಿಸಲಾಗಿದ್ದು 1912 ರಲ್ಲಿ ಸಿಡ್ನಿಯಲ್ಲಿ ನೋಂದಾಯಿಸಲಾಯಿತು.

ಸುಮಾರು ವರ್ಷಗಳ ಕಾಲ ಆಸ್ಟ್ರೇಲಿಯಾ ನೌಕಾದಳದಲ್ಲಿ ಸೇವೆ ಸಲ್ಲಿಸಿದ ಈ ಹಡಗನ್ನು 1972ರಲ್ಲಿ ಸೇವೆಯಿಂದ ತೆಗೆದು ಅದನ್ನು ಬಿಡಿಭಾಗಗಳನ್ನು ತೆರವುಗೊಳಿಸಲು ಹೋಮ್ ಬುಶ್ ಕೊಲ್ಲಿಗೆ ಕರೆತರಲಾಯಿತಾದರೂ ವಿಭಜಿಸುವ ಮುನ್ನವೇ ನೌಕಾನೆಲೆಯು ಮುಚ್ಚಲ್ಪಟ್ಟು ಆ ಹಡಗು ತೇಲುತ್ತಾ ದಡದಲ್ಲಿಯೇ ನಿಲ್ಲಬೇಕಾಯಿತು. ಹೀಗೆ ಸರಿಸುಮಾರು 102 ವರ್ಷಗಳ ಇತಿಹಾಸ ಹೊಂದಿರುವ ಈ ಹಡಗಿನ ಮೇಲೆ ಮರಗಳು ಬೆಳೆದಿದ್ದು ಇವುಗಳ ತೂಕ ಸರಿಸುಮಾರು 1140 ಟನ್ ಇರಬಹುದೆಂದು ಅಂದಾಜು ಮಾಡಲಾಗಿದೆ. ಒಟ್ಟಿನಲ್ಲಿ ಇದೊಂದು ಪ್ರವಾಸಿಗರ ಆಕರ್ಷಣೆಯ ಕೇಂದ್ರಬಿಂದುವಾಗಿದೆ.

■ ಪುರುಷೋತ್ತಮ ಎಂ.